**ದಿನಾಂಕ ಃ 30.03.2023.**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ ಡಬ್ಲ್ಯೂ - 1**

**<u>ಮುಂದುವರೆದ ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ ಃ</u>**

ನಾನು ದಿಃ17.02.2021 ರಂದು ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತೇವೆ.

ಈ ಕೆಳಕಂಡ ದಾಖಲಾತಿಗಳಿರುತ್ತವೆಃ

1. ಸರ್ವೆ ನಂ. 57/3 ರ ಆರ್ ಟಿ ಸಿ
2. ಸರ್ವೆ ನಂ. 57/4 ರ ಆರ್ ಟಿ ಸಿ 2020-21
3. ಸರ್ವೆ ನಂ. 57/4 ರ ಆರ್ ಟಿ ಸಿ 2022-23
4. ಸರ್ವೆ ನಂ. 57/3 ರ ಆರ್ ಟಿ ಸಿ 2022-23
5. ಮ್ಯುಟೇಷನ್ ಆದೇಶ ನಂ.ಟಿ 20
6. ಮ್ಯುಟೇಷನ್ ಆದೇಶ ನಂ.ಟಿ 3

ಇವುಗಳನ್ನು ಈಗ ಕ್ರಮವಾಗಿ ನಿಪಿ.1 ರಿಂದ ನಿಪಿ.6 ಎಂದು ಗುರುತಿಸಲಾಯಿತು.

**(ಅರ್ಜಿದಾರರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆ ಮುಂದೂಡಲಾಯಿತು.)**

**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.</u>**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ 03.02.2024.**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ ಡಬ್ಲ್ಯೂ - 1**

**ಮುಂದುವರೆದ ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ ಃ**

ನಾನು ಇಂದು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

7. ನೋಟಿಸ್ ದಿಃ 27.01.2017.

8. ನೋಟಿಸ್ ದಿಃ 09.08.2018.

9. ನೋಟಿಸ್ ದಿಃ 27.01.2017.

ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು ನಿಪಿ 7 ರಿಂದ 9 ಎಂದು ಗುರುತಿಸಲಾಯಿತು.

**ಎದುರುದಾರರ ಪರ ವಕೀಲರ ವಿನಂತಿಯ ಮೇರೆಗೆ ವಾಟಿ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ 15.11.2024**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ ಡಬ್ಲ್ಯೂ - 1**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಜೆ.ಹೆಚ್.ಎಸ್.ಪಿ. ವಕೀಲರಿಂದಃ**

ನನ್ನ ಜಮೀನಿನ ಸರ್ವೆ ನಂ.ಗಳು 57/3 ಮತ್ತು 57/4. ಆ ಜಮೀನುಗಳಲ್ಲಿ 19 ಗುಂಟೆ ಪ್ರದೇಶದಲ್ಲಿ ಎದುರುದಾರರು ಲೈನ್ ಎಳೆದಿದ್ದಾರೆ. ನನ್ನ ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ 16 ಗುಂಟೆ ಜಮೀನಿನಲ್ಲಿ ಲೈನ್ ಎಳೆದಿದ್ದಾರೆ ಎಂದು ಹೇಳಿರುವುದು ಸರಿ ಇದೆ. ನನ್ನ ಜಮೀನಿನ ಅಪಮೌಲ್ಯಕ್ಕಾಗಿ ಎದುರುದಾರರು ನನ್ನ ಖಾತೆಗೆ 1,81,913/- ರೂ.ಗಳನ್ನು ಜಮಾ ಮಾಡಿದ್ದಾರೆ ಎಂದರೆ ಸರಿ.

2. ನನಗೆ ಹೊಂಗೆ ಮರದ ಕಾಯಿಯಿಂದ ವರ್ಷಕ್ಕೆ 40,000/- ರೂ.ಗಳ ಆದಾಯ ಬರುತ್ತಿತ್ತು. ಅದನ್ನು ತೋರಿಸಲು ಇಲ್ಲಿ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ದಾಖಲೆಯಲ್ಲಿ ಅಷ್ಟು ಆದಾಯ ತೋರಿಸುವ ದಾಖಲೆ ಇಲ್ಲ ಎಂದರೆ ಸರಿಯಲ್ಲ. 3 ಹೊಂಗೆ ಮರಗಳು ಕಟಾವು ಮಾಡಿದರ ಬಾಬ್ತು ಎದುರುದಾರರು ನನಗೆ 4,070/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ.

3. ನನ್ನ ಜಮೀನಿನಲ್ಲಿದ್ದ 24 ತೆಂಗಿನ ಮರಗಳನ್ನು ಕಟಾವು ಮಾಡಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಸಾಕ್ಷಿಗೆ ನಿಪಿ.7ನ್ನು ತೋರಿಸಲಾಗಿ ಅದೇ ದಾಖಲೆಯೇ ಎನ್ನುವುದಕ್ಕೆ ಗೊತ್ತಿಲ್ಲವೆಂದು ಹೇಳಿದ್ದಾರೆ. ನಿಪಿ.7ರ ಪ್ರಕಾರ ನನ್ನ ಜಮೀನಿನಲ್ಲಿ ಕಟಾವು ಮಾಡಿರುವುದು, ತೆಂಗಿನ ಸಸಿಗಳು, ತೆಂಗಿನ ಮರಗಳು ಅಲ್ಲ ಎಂದರೆ ಸರಿ. ತೆಂಗಿನ ಸಸಿಗಳು ಕಟಾವು ಮಾಡಿದರ ಬಾಬ್ತು ಎದುರುದಾರರು ನನಗೆ 86,480/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ಒಟ್ಟು 24 ತೆಂಗಿನ ಸಸಿಗಳನ್ನು ಕಟಾವು ಮಾಡಿರುವುದು, 16 ಸಸಿಗಳು ಮಾತ್ರ ಎಂದರೆ ಸರಿಯಲ್ಲ.

4. ನನ್ನ ಜಮೀನಿನ ಅಪಮೌಲ್ಯ, ಬೆಳೆ ನಷ್ಟ ಪರಿಹಾರ, ಮರಗಳ ಬಾಬ್ತು ಪರಿಹಾರ ಎಲ್ಲಾ ಸೇರಿ ಎದುರುದಾರರು ನನಗೆ 2,82,404/- ರೂ.ಗಳನ್ನು ಕೊಟ್ಟಿದ್ದಾರೆ

ಎಂದರೆ ಸರಿ. ನನ್ನ ಜಮೀನಿನಲ್ಲಿ 1 ಗುಂಟೆ ಜಮೀನಿಗೆ ಈಗ ಬೆಲೆ 2,00,000/- ರೂ.ಗಳು ಇದೆ ಎಂದು ತೋರಿಸಲು ಇಲ್ಲಿ ದಾಖಲೆಯನ್ನು ಹಾಜರುಪಡಿಸಿಲ್ಲ. ಎಷ್ಟು ವರ್ಷಗಳ ಹಿಂದೆ ನನ್ನ ಜಮೀನಿನಲ್ಲಿ ಲೈನನ್ನು ಎಳೆದಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಹಾಜರುಪಡಿಸಿರುವ ಪಹಣಿಗಳಲ್ಲಿ ಲೈನು ಎಳೆಯುವ ಕಾಲಕ್ಕೆ ನನ್ನ ಜಮೀನಿನಲ್ಲಿ ಏನು ಬೆಳೆ ಇತ್ತು ಎಂದು ತೋರಿಸುತ್ತಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನನ್ನ ಜಮೀನಿಗೆ ಲೈನು ಎಳೆಯುವ ಕಾಲಕ್ಕೆ ಇದ್ದ ಸೂಕ್ತ ಬೆಲೆಯನ್ನು ನೀಡಿದ್ದರೂ ಸಹ ನಾನು ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**